

# ಕೊನೆಯಿರದ ಸುರಂಗ

ಸಾವು–ಬದುಕಿನ ನಡುವಿನ ಹೋರಾಟದ ಕ್ಷಣಗಳನ್ನು ರೋಚಕವಾಗಿ ಸೆರೆಹಿಡಿಯುತ್ತಲೇ, ನಮ್ಮೆಲ್ಲರ ಬದುಕಿನ ಓಟದ ಚಿತ್ರಣವನ್ನೂ ಧ್ವನಿಸುವ ರೂಪಕವನ್ನು ಕಟ್ಟಿಕೊಡುವ ಕಿರುಚಿತ್ರವಿದು.

■ ಗೌರಿ

ಸಾವು–ಬದುಕಿನ ನಡುವಿನ ಹೋರಾಟವೇ ಬಹುತೇಕ ಎಲ್ಲ ಥ್ರಿಲ್ಲರ್ ಸಿನಿಮಾಗಳ ಜೀವಾಳವಾಗಿರುತ್ತದೆ. ದುರ್ಬರ ಸಾವನ್ನು ತಂದೊಡ್ಡಬಹುದಾದ ಅಪಾಯವೊಂದನ್ನು ಬೆನ್ನತ್ತಿಸಿಕೊಂಡು ಅದರಿಂದ ತಪ್ಪಿಸಿಕೊಳ್ಳುವುದನ್ನು ನೋಡುವಾಗ ನಮ್ಮಲ್ಲಿ ಹುಟ್ಟುವ ಉಸಿರು ಬಿಗಿದು ಹಿಡಿದುಕೊಳ್ಳುವ ಭಾವವೇ ಎಲ್ಲ ಥ್ರಿಲ್ಲರ್ ಸಿನಿಮಾಗಳ ಯಶಸ್ಸನ್ನು ನಿರ್ಧರಿಸುವುದು. ಆದರೆ ಇಡೀ ಸಿನಿಮಾವನ್ನು ಇದೇ ಭಾವದಲ್ಲಿ ಕಟ್ಟುವುದು ಬಹುಕಷ್ಟ. ಹಾಗಾಗಿ ಹಲವು ಭಾವಗಳನ್ನು ತರಲು ಪಾತ್ರಗಳ ಹಿನ್ನೆಲೆ, ಅವರ ಗುರಿ, ಅವರ ಬದುಕಿಗೆ ಹೆಣೆದುಕೊಂಡಿರುವ ಇತರ ವ್ಯಕ್ತಿಗಳ ಕಥೆಗಳು ಹೀಗೆ ಹಲಬಗೆಯ ಎಳೆಗಳನ್ನು ಜೋಡಿಸಿ ಕಥನಹಂದರ ಕಟ್ಟುತ್ತಾರೆ.

ಈ ಕಿರುಚಿತ್ರದಲ್ಲಿ ಅಂಥ ಫ್ಲ್ಯಾಷ್‌ಬ್ಯಾಕ್‌ಗಳಿಲ್ಲ. ಪಾತ್ರಗಳ ಗುರಿ ಏನು ಎಂಬುದರ ಸ್ಪಷ್ಟಚಿತ್ರಣವೂ ಇಲ್ಲ. ಮೂರು ಮುಖ್ಯ ಪಾತ್ರಗಳಲ್ಲಿ ಒಂದು ಪಾತ್ರದ ಫೋನ್ ಸಂಭಾಷಣೆಯ ಹೊರತು ಬೇರೆ ಕಥನ ಎಳೆಯ ಸುಳಿವಿಲ್ಲ. ಆದರೂ ಈ ಚಿತ್ರ ಉಸಿರು ಬಿಗಿಹಿಡಿದು ನೋಡಿಸಿಕೊಳ್ಳುತ್ತದೆ. ದೂರದಿಂದ ನಿಧಾನಕ್ಕೆ ಬರುತ್ತಿರುವಂತೆ ಕಾಣಿಸುವ ರೈಲೊಂದು ಹತ್ತಿರ ಬರುತ್ತಿರುವ ಹಾಗೆ ವೇಗ ಹೆಚ್ಚಿಸಿಕೊಂಡ ಹಾಗೆ ಭಾಸವಾಗಿ, ಕೊನೆಗೆ ಎದುರಿಗೆ ಹಾಯುವಾಗ ನಿಂತ ನೆಲವೇ ನಡುಗಿಸಿ, ಎದೆಬಿರಿವ ಹಾಗೆ ಹಾರ್ನ್ ಮಾಡಿ, ತನ್ನ ಸದ್ದನ್ನೂ ತಾನೇ ಗುಡಿಸಿಕೊಂಡು ಹೋಗುವ ಹಾಗೆ ಹೋಗಿಬಿಡುತ್ತದಲ್ಲ, ಈ ಕಿರುಚಿತ್ರ ನೋಡಿದ ಅನುಭವವೂ ಅಂಥದ್ದೇ.

ಹೆಸರು: ದ ಟನೆಲ್ (ಇಂಗ್ಲಿಷ್)
ನಿರ್ದೇಶನ: ಆರಶ್ ಆಸ್ಟಿಯಾನಿ
ನಿರ್ಮಾಣ: ಆ್ಯನಾ ಗ್ರಿಫಿನ್
ಸಂಗೀತ: ಸಿಜೆ ಮಿರ್ರಾ
ಸಂಕಲನ: ಸ್ಟೂವರ್ಟ್ ಗೇರ್ಯೂರ್ಡ್
ಛಾಯಾಗ್ರಹಣ: ನಿಕ್ ಮೋರಿಸ್
ತಾರಾಗಣ: ಮಹಮದ್ ಅಮಿರಿ, ರಮಿನ್ ಫರಾಹಾನಿ, ಜಾರ್ಜ್ ಜಾರ್ಜಿಯೊ

ಅಂದಹಾಗೆ, ಈ ಇಡೀ ಕಿರುಚಿತ್ರ ನಡೆಯುವುದು ರೈಲ್ವೆ ಸುರಂಗದಲ್ಲಿ! ಮೊದಲ ಒಂದು ದೃಶ್ಯವನ್ನು ಹೊರತುಪಡಿಸಿದರೆ ಇಡೀ ಚಿತ್ರ ಸುರಂಗದೊಳಗೇ ಘಟಿಸುತ್ತದೆ; ವರ್ತಮಾನದಲ್ಲಿಯೇ ಘಟಿಸುತ್ತದೆ.

ಕುಟುಂಬವನ್ನು ತೊರೆದು ಬಂದಿರುವ ಮೂವರು ನಿರಾಶ್ರಿತರು ಇಂಗ್ಲೆಂಡ್‌ನತ್ತ ಹೊರಟಿದ್ದಾರೆ. ಪೊಲೀಸರ ಕಣ್ಣುತಪ್ಪಿಸಿ ಅವರು ಆ ದೇಶಕ್ಕೆ ನುಸುಳಲು ಇರುವ ದಾರಿ ಫ್ರಾನ್ಸ್ ಮತ್ತು ಇಂಗ್ಲೆಂಡ್ ನಡುವಿನ ರೈಲ್ವೆ ಸುರಂಗ. ಸಾಕಷ್ಟು ದೂರ ಇರುವ ಆ ಸುರಂಗವನ್ನು ಅವರು ಒಂದು ರೈಲು ಬರುವ ಮೊದಲೇ ದಾಟಬೇಕು. ಪ್ರಾರಂಭದಲ್ಲಿ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತ, ಒಬ್ಬರಲ್ಲಿ ಇನ್ನೊಬ್ಬರು ಆತ್ಮವಿಶ್ವಾಸ ತುಂಬಿಕೊಳ್ಳುತ್ತಲೇ ಓಡಲು ಶುರುಮಾಡುತ್ತಾರೆ. ಆದರೆ ಮೈಯಲ್ಲಿ ಬೆವರು ಬಸಿಯುತ್ತಿದ್ದಂತೆಲ್ಲ, ಕಾಲಲ್ಲಿ ಶಕ್ತಿ ಉಡುಗುತ್ತಿರುವಂತೆಲ್ಲ ಮಾತುಗಳು ಕಡಿಮೆಯಾಗುತ್ತವೆ, ಭೀತಿ ಕುಡಿಯೊಡೆಯುತ್ತವೆ.

ಸುರಂಗದ ನಡುವಿನಲ್ಲಿರುವಾಗಲೇ ಒಮ್ಮೆ ರೈಲು ಬಂದುಬಿಡುತ್ತದೆ. ಸುರಂಗದ ನಡುವಲ್ಲಿ ರಿಪೇರಿಗೆಂದು ಇಟ್ಟಿದ್ದ ಒಂದು ಸಣ್ಣ ಸಂಧಿಯಿರುತ್ತದೆ. ಅಲ್ಲಿ ಇಬ್ಬರು ಮಾತ್ರವೇ ಅಡಗಿಕೂತುಕೊಳ್ಳಬಹುದು. ಈ ಮೂವರಲ್ಲಿ ಒಬ್ಬನು ಉಳಿದಿಬ್ಬರಿಗೆ ಅವಕಾಶ ಮಾಡಿಕೊಟ್ಟು ತಾನು ಮುಂದಕ್ಕೆ ಓಡುತ್ತಾನೆ. ರೈಲು ಹೋದ ನಂತರ ಹೋಗಿ ನೋಡಿದರೆ ಅವನ ದೇಹ ರೈಲ್ವೆ ಹಳಿಯಲ್ಲಿ ಬಿದ್ದು ನುಜ್ಜುಗುಜ್ಜಾಗಿರುತ್ತದೆ.

ಈಗೋ ಇನ್ನೊಂದು ಕ್ಷಣಕ್ಕೋ ಬಂದು ಬಿಡಬಹುದಾದ ರೈಲು ನಮ್ಮನ್ನು ಛಿದ್ರಗೊಳಿಸುತ್ತದೆ ಎಂಬ ಭಯ ಒಂದು ಕಡೆ, ಕಿಲೋಮೀಟರ್‌ಗಟ್ಟಲೆ ಓಡಿಬಂದು ಬಾಯೊಣಗಿ, ಶಕ್ತಿಯುಡುಗಿ ಹೆಜ್ಜೆ ಎತ್ತಿ ಇಡಲಾಗದ ಅಸಹಾಯಕತೆ ಇನ್ನೊಂದು ಕಡೆಗೆ. ತುದಿಯಿಲ್ಲದ ಸುರಂಗ; ಅಲ್ಲಿ ಸಾವೂ ಬದುಕಿನ ಒಂದು ಭಾಗ. ಈ ಸಾವು ಬದುಕಿನ ನಡುವಿನ ಹೋರಾಟವನ್ನು ರೋಚಕವೂ ಅಷ್ಟೇ ದಾರುಣವೂ ಆಗಿ ಸೆರೆಹಿಡಿದಿರುವುದೇ ಈ ಕಿರುಚಿತ್ರದ ವಿಶೇಷ. ಹಾಗಾಗಿಯೇ ಇದು ಏಕಕಾಲಕ್ಕೆ ಮೂವರು ವ್ಯಕ್ತಿಗಳ ಜೀವ–ಜೀವನದ ಹೋರಾಟದ ಜೊತೆಗೆ ನಮ್ಮೆಲ್ಲರ ಬದುಕಿನ ಓಟಕ್ಕೆ ರೂಪಕವೂ ಆಗಿಬಿಡುತ್ತದೆ.

ಕಿರುಚಿತ್ರ ವೀಕ್ಷಣೆಗೆ https://bit.ly/3bmitFE ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.